

# ‘ನವ ಬ್ರಹ್ಮ’ ಮಂದಿರಗಳ ಆಲಂಪುರ

ತೆಲಂಗಾಣದ ಆಲಂಪುರ ಚಾಲುಕ್ಯ ವಾಸ್ತುಶಿಲ್ಪದ ಅನನ್ಯತೆಯನ್ನು ಸಾರುವ ಪ್ರವಾಸಿಕೇಂದ್ರಗಳಲ್ಲೊಂದು. ನಲ್ಲಮಾಲಾ ಪರ್ವತಶ್ರೇಣಿ ಹಾಗೂ ತುಂಗಭದ್ರ ಮತ್ತು ಕೃಷ್ಣಾ ನದಿಗಳ ಸಂಗಮದ ಪರಿಸರ ಆಲಂಪುರದ ಸೌಂದರ್ಯಕ್ಕೆ ವಿಶೇಷ ಪ್ರಭೆ ಒದಗಿಸಿದೆ.

■ **ಗೀತಾ ಕುಂದಾಪುರ**



**ಕ**ನ್ಯಾಕುಮಾರಿ ಮತ್ತು ಶ್ರೀನಗರವನ್ನು ಜೋಡಿಸುವ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 44ರಲ್ಲಿ ಸಾಗಿ, ತೆಲಂಗಾಣದ ಕರ್ನೂಲಿನಿಂದ ಸ್ವಲ್ಪ ಮುಂದೆ, ಒಳರಸ್ತೆಯಲ್ಲಿ ಸುಮಾರು 25 ಕಿ.ಮೀ. ಪ್ರಯಾಣ ಮಾಡಿದರೆ ಮಂದಿರಗಳ ನಗರ ‘ಆಲಂಪುರ’ ಸಿಗುತ್ತದೆ. ಅದೊಂದು ಶಿಲ್ಪಕಲೆ ಸಮೃದ್ಧಿಯ ತಾಣ, ಪ್ರವಾಸಿಗಳ ಆಕರ್ಷಣೆಯ ಕೇಂದ್ರ.

ಆಲಂಪುರಕ್ಕೆ ದಕ್ಷಿಣ ಕಾಶಿ ಎನ್ನುವ ವಿಶೇಷಣವೂ ಇದೆ. ನದಿಯ ಮಡಿಲು ಹಾಗೂ ಪರ್ವತ ಶ್ರೇಣಿಗಳ ತಪ್ಪಲು ಸಂಯೋಜಿಸಿರುವ ವಿಶಿಷ್ಟ ಸೌಂದರ್ಯ ಈ ಪ್ರದೇಶದ್ದು. ತುಂಗಭದ್ರ ಮತ್ತು ಕೃಷ್ಣ ನದಿಯ ಸಂಗಮ ಸ್ಥಳದಲ್ಲಿರುವ ಆಲಂಪುರ, ನಲ್ಲಮಾಲಾ ಪರ್ವತ ಶ್ರೇಣಿಗಳಿಂದ ಸುತ್ತುವರೆದಿದೆ. ಒಂದು ಕಾಲದಲ್ಲಿ ಆಲಂಪುರವು ಶಾತವಾಹನ, ಬಾದಾಮಿಯ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣಿ ಚಾಲುಕ್ಯ, ಕಾಕಾತೀಯ ಮತ್ತು ವಿಜಯನಗರದ ರಾಜರ ಆಡಳಿತಕ್ಕೆ ಒಳಪಟ್ಟಿತ್ತು.